Village D Nandi CD

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

## "ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಪತ್ರ"

ವಿಷಯ : ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮದ ಸ.ನಂ. 9 (ಹೊಸ ನಂ.9/1) ರಲ್ಲಿ 5ಎ–03ಗು, 10 ರಲ್ಲಿ 5ಎ–03ಗು, 11 ರಲ್ಲಿ 6ಎ–18ಗು, 12 ರಲ್ಲಿ 4ಎ–39ಗು ಮತ್ತು 13 ರಲ್ಲಿ 1ಎ–15ಗು ಒಟ್ಟು 22ಎ–38ಗು ಅಥವಾ 92874.06 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ 'ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ' ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ :

1) ಅರ್ಜಿದಾರರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಗಾಲ್ಫ್ ಕೋರ್ಸ್ ಮತ್ತು ಹೋಟೆಲ್ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿ ಸಲ್ಲಿಸಿದ ಮನವಿ ಪತ್ರ ದಿನಾಂಕ: 07/05/1996.
2) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ ಬಿಎಂಆರ್‌ಡಿಎ/ ಎಲ್‌ಎಒ/ಟಿ.ಎಸ್/5/1995–96, ದಿನಾಂಕ: 01/01/1997.
3) ಅರ್ಜಿದಾರರು ಗಾಲ್ಫ್ ಷೈರ್ ಪ್ರಾಜೆಕ್ಟ್ ಮತ್ತು ಹೋಟೆಲ್ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿ ಸಂಖ್ಯೆ 979, ದಿನಾಂಕ : 05/01/2007.
4) ದಿನಾಂಕ: 23/02/2007 ರಂದು ನಡೆದ ಪ್ರಾಧಿಕಾರದ 37 ನೇ ಸಭೆಯ ವಿಷಯ ಸಂಖ್ಯೆ: 37(4) ರ ನಡಾವಳಿ.
5) ಈ ಪ್ರಾಧಿಕಾರದಿಂದ ಪರಿಷ್ಕೃತ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ:ಬಿಐಎಎಪಿಎ/ಟಿಪಿ/ಎಲ್‌ಎಒ/75/2006–07, ದಿನಾಂಕ: 27/02/2007.
6) ಈ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ/ಎಲ್‌ಎಒ/75/2006–07, ದಿನಾಂಕ: 07/07/2011.
7) ಅರ್ಜಿದಾರರು ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 11/12/2019
8) ದಿನಾಂಕ: 20/01/2020 ರಂದು ನಡೆದ ಪ್ರಾಧಿಕಾರದ 128 ನೇ ಸಭೆಯ ವಿಷಯ ಸಂಖ್ಯೆ: 128.53 ರ ನಡಾವಳಿ.
9) ಈ ಪ್ರಾಧಿಕಾರದಿಂದ ಪರಿಷ್ಕೃತ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ:ಬಿಐಎಎಪಿಎ/ಟಿಪಿ/ಎಲ್‌ಎಒ/75/2006–07/87, ದಿನಾಂಕ: 18/05/2020.
10) ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಲ್‌ಎನ್‌ಡಿ(ದೇ)ಸಿಆರ್/49/2021–22, ದಿನಾಂಕ: 14/10/2020.
11) ಮೆ॥ ವಿಲೇಜ್ ಡಿ ನಂದಿ ಪ್ರೈ.ಲಿ., ಪರವಾಗಿ ನಿರ್ದೇಶಕರಾದ ಶ್ರೀಮತಿ ಬದ್ರುನಿಸ್ಸಾ ಇರ್ಫಾನ್ ರವರು ಸಲ್ಲಿಸಿರುವ ಅರ್ಜಿ ಸಂಖ್ಯೆ 4312, ದಿನಾಂಕ: 18/01/2022.
12) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಕಛೇರಿ ಅಧಿಕೃತ ಜ್ಞಾಪನ ಪತ್ರಗಳ ಸಂ: ಎಎಲ್‌ಎನ್ ಎಸ್‌ಆರ್ 22/1989–90 ದಿ:15/03/1990 (ಸ.ನಂ.9), ಎಎಲ್‌ಎನ್ ಎಸ್‌ಆರ್22/1990–91 ದಿ:18/10/1990 (ಸ.ನಂ 10), ಎಎಲ್‌ಎನ್/ ಎಸ್‌ಆರ್/ 36/1990–91 ದಿ:17/12/1990 (ಸ.ನಂ 11, 12 & 13)
13) ದಿನಾಂಕ: 19/01/2022 ರಂದು ನಡೆದ ಪ್ರಾಧಿಕಾರದ 133 ನೇ ಸಭೆಯ ವಿಷಯ ಸಂ. 133.159 ರ ನಡಾವಳಿ.

14) ಈ ಪ್ರಾಧಿಕಾರದ ಸಮಸಂಖ್ಯೆ ಪತ್ರ ದಿನಾಂಕ: 11/05/2022.

15) ಅರ್ಜಿದಾರರು ಪ್ರಾಧಿಕಾರದ ರಶೀದಿ ಸಂಖ್ಯೆ: 0011245, ದಿನಾಂಕ: 13/05/2022 ರಂತೆ ಒಟ್ಟು ರೂ. 28,79,120-00 (ಇಪ್ಪತ್ತೆಂಟು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಒಂದು ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

16) ಅರ್ಜಿದಾರರು ಗಾಲ್ಫ್ ರಿಸಾರ್ಟ್ ಮತ್ತು ಸ್ಪಾ ಉದ್ದೇಶದ ಪರಿಷ್ಕೃತ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಬರುವ ರಾಜ್ಯ ಹೆದ್ದಾರಿ ಸಂಖ್ಯೆ 104 ರ ರಸ್ತೆ ಮಾರ್ಜಿನ್‌ಗಾಗಿ ಕಾಯ್ದಿರಿಸಿರುವ ಜಾಗವನ್ನು ಈ ಯೋಜನಾ ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿರುವ ಬಗ್ಗೆ ಪರಿತ್ಯಾಜನಾ ಪತ್ರ, ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸಲ್ಲಿಸಿದ ದಿನಾಂಕ: 15/05/2020.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (10) ರ ಮನವಿ ಅರ್ಜಿಯಲ್ಲಿ ಮೆ॥ ವಿಲೇಜ್ ಡಿ ನಂದಿ ಪ್ರೈ.ಲಿ., ಪರವಾಗಿ ನಿರ್ದೇಶಕರಾದ ಶ್ರೀಮತಿ ಬದ್ರುನಿಸ್ಸಾ ಇರ್ಫಾನ್ ಇವರು ಗಾಲ್ಫ್ ರಿಸಾರ್ಟ್ ಮತ್ತು ಸ್ಪಾ ಉದ್ದೇಶಕ್ಕಾಗಿ ಅನುಮೋದನೆ ನೀಡಲಾಗಿರುವ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ Future expansion & substationಗಾಗಿ ಗುರ್ತಿಸಿರುವ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮದ ಸ.ನಂ. 9 (ಹೊಸ ನಂ.9/1) ರಲ್ಲಿ 5ಎ-03ಗು, 10 ರಲ್ಲಿ 5ಎ-03ಗು, 11 ರಲ್ಲಿ 6ಎ-18ಗು, 12 ರಲ್ಲಿ 4ಎ-39ಗು ಮತ್ತು 13 ರಲ್ಲಿ 1ಎ-15ಗು ಒಟ್ಟು 22ಎ-38ಗು ಅಥವಾ 92874.06 ಚ.ಮೀ ವಿಸ್ತೀರ್ಣದ ಜಮೀನುಗಳಲ್ಲಿ 'ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ' ಅನುಮೋದನೆ ನೀಡಲು ಕೋರಿರುತ್ತಾರೆ.

ಮೆ॥ ನಂದಿ ಹಿಲ್ಸ್ ಹೋಟೆಲ್ಸ್ ಮತ್ತು ರೆಸಾರ್ಟ್ ಲಿಮಿಟೆಡ್ ಇವರು ಉಲ್ಲೇಖ (1) ರಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ, ಸೊಣ್ಣೇನಹಳ್ಳಿ, ಕಾರಹಳ್ಳಿ ಅಮಾನಿಕೆರೆ ಗ್ರಾಮಗಳಲ್ಲಿನ ಹಲವಾರು ಸರ್ವೆ ನಂಬರುಗಳಲ್ಲಿ ಒಟ್ಟು 228ಎ-14ಗು ವಿಸ್ತೀರ್ಣದ ಪ್ರದೇಶದಲ್ಲಿ ಗಾಲ್ಫ್ ಕೋರ್ಸ್ ಮತ್ತು ಹೋಟೆಲ್ ಮತ್ತು ಕ್ಲಬ್ ಹೌಸ್ ಉದ್ದೇಶಕ್ಕಾಗಿ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ಕೋರಿರುವಂತೆ ಉಲ್ಲೇಖ (2) ರ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ದಿನಾಂಕ: 01/01/1997 ರಲ್ಲಿ 92 ವಸತಿ ವಿಲ್ಲಾಗಳೊಂದಿಗೆ ಗಾಲ್ಫ್ ಕೋರ್ಸ್ ಮತ್ತು ಹೋಟೆಲ್ ಮತ್ತು ಕ್ಲಬ್‌ಹೌಸ್ ಉದ್ದೇಶದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲಾಗಿತ್ತು.

ಉಲ್ಲೇಖ (3) ರಲ್ಲಿ ಅರ್ಜಿದಾರರಾದ ಮೇ: ಪ್ರೆಸ್ಟೀಜ್ ಎಸ್ಟೇಟ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ c/o ವಿಲೇಜ್ ದಿ.ನಂದಿ ಪ್ರೈವೇಟ್ ಲಿಮಿಟೆಡ್, ಪೆನ್ನಾರ್ ಹೋಟೆಲ್ಸ್ ಮತ್ತು ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್, ಮಟ್ ಹಿಲ್ಸ್ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್, ಡೌನ್ ಹಿಲ್ ಹಾಲಿಡೇ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರುಗಳು ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ, ತೈಲಗೆರೆ, ಸೊಣ್ಣೇನಹಳ್ಳಿ, ಕಾರಹಳ್ಳಿ ಅಮಾನಿಕೆರೆ ಮತ್ತು ಕೋಡಗುರ್ಕಿ ಗ್ರಾಮಗಳಲ್ಲಿನ ಹಲವಾರು ಸರ್ವೆ ನಂಬರುಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ನೀಡಲಾದ ಒಟ್ಟು 228ಎ-14ಗು ವಿಸ್ತೀರ್ಣ ಪ್ರದೇಶಕ್ಕೆ ಹೆಚ್ಚುವರಿಯಾಗಿ 71ಎ-12ಗು ವಿಸ್ತೀರ್ಣ ಪ್ರದೇಶವನ್ನು ಸೇರಿಸಿಕೊಂಡು, ಒಟ್ಟು 299ಎ-26ಗು ವಿಸ್ತೀರ್ಣ ಪ್ರದೇಶದಲ್ಲಿ 250 ವಸತಿ ವಿಲ್ಲಾಗಳು, ಗಾಲ್ಫ್ ಕೋರ್ಸ್ ರೆಸಾರ್ಟ್ ಮತ್ತು ಹೋಟೆಲ್ ಉದ್ದೇಶದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿದ್ದರು.

ಉಲ್ಲೇಖ (4) ರಲ್ಲಿನ ದಿನಾಂಕ: 23/02/2007 ರಂದು ನಡೆದ ಪ್ರಾಧಿಕಾರದ 37ನೇ ಸಭೆಯ ವಿಷಯ ಸಂಖ್ಯೆ 37(4) ರ ನಡಾವಳಿಯ ರೀತ್ಯ ಉಲ್ಲೇಖ (5) ರಲ್ಲಿ ಯೋಜನಾ ಪ್ರಾಧಿಕಾರದಿಂದ 250 ವಸತಿ ವಿಲ್ಲಾಗಳು

ಗಾಲ್ಫ್ ಕೋರ್ಸ್ ರೆಸಾರ್ಟ್ ಮತ್ತು ಹೋಟೆಲ್ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆಯನ್ನು ನೀಡಲಾಗಿತ್ತು. ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ಪರಿಷ್ಕೃತ ಅಭಿವೃದ್ಧಿ ನಕ್ಷೆಗೆ ಹಲವು ಷರತ್ತುಗೊಳಪಟ್ಟು ಉಲ್ಲೇಖ (6) ರನ್ವಯ ನವೀಕರಿಸಲಾಗಿತ್ತು.

ಅರ್ಜಿದಾರರು ಉಲ್ಲೇಖ (7) ರಲ್ಲಿನ ಮನವಿಯಲ್ಲಿ, ಪ್ರಾಧಿಕಾರದಿಂದ ಈಗಾಗಲೇ ಅನುಮೋದನೆ ನೀಡಲಾಗಿರುವ ಗಾಲ್ಫ್ ಕೋರ್ಸ್ ರೆಸಾರ್ಟ್ ಮತ್ತು ಹೋಟೆಲ್ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಪರಿಷ್ಕೃತ ಹೋಟೆಲ್ ಮತ್ತು ಪರಿಷ್ಕೃತ ಕನ್ವೆನ್‌ಷನ್ ಸೆಂಟರ್‌ಗಳನ್ನು ಅಳವಡಿಸಿರುವ ಹಿನ್ನಲೆಯಲ್ಲಿ ಗಾಲ್ಫ್ ರಿಸಾರ್ಟ್ ಮತ್ತು ಸ್ಪಾ ಉದ್ದೇಶಕ್ಕಾಗಿ ಪರಿಷ್ಕೃತ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ನೀಡಲು ಕೋರಿರುವ ಬಗ್ಗೆ ಉಲ್ಲೇಖ (8) ರ ಪ್ರಾಧಿಕಾರದ ಸಭೆಯ ನಡವಳಿಯ ರೀತ್ಯ ಉಲ್ಲೇಖ (9) ರನ್ವಯ ಗಾಲ್ಫ್ ರಿಸಾರ್ಟ್ ಮತ್ತು ಸ್ಪಾ ಉದ್ದೇಶಕ್ಕಾಗಿ "ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆ" ಗೆ ಅನುಮೋದನೆ ನೀಡಲಾಗಿರುತ್ತದೆ. ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಗುರುತಿಸಲಾದ ಕಾಲುದಾರಿ 'ಬಿ' ಖರಾಬು ಪಥ ಬದಲಾವಣೆ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಉಲೇಖ (10) ರಲ್ಲಿ ಪಡೆದಿರುವ ಪಥಬದಲಾವಣೆ ಆದೇಶವನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (11) ರಂತೆ ಅರ್ಜಿದಾರರು ಗಾಲ್ಫ್ ರೆಸಾರ್ಟ್ ಮತ್ತು ಸ್ಪಾ ಉದ್ದೇಶದ ಪರಿಷ್ಕೃತ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ Future expansion & substationಗಾಗಿ ಗುರ್ತಿಸಿರುವ ಪ್ರದೇಶದಲ್ಲಿ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದನೆ ನೀಡಲು ಕೋರಿರುತ್ತಾರೆ. ಈಗಾಗಲೇ ಅನುಮೋದನೆ ನೀಡಲಾಗಿರುವ ಪ್ರಶ್ನಿತ ಜಮೀನುಗಳು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ಭೂಉಪಯೋಗ ವಲಯದಲ್ಲಿ ಇರುತ್ತದೆ. ಅನುಮೋದಿತ ವಲಯನಿಯಮಾವಳಿಯಲ್ಲಿ The projects cleared by BMRDA/BIAAPA, converted lands upto 17.09.2004 are to be protected for respective use, (by oversight if any converted land after 17-9-2004 is incorporated against the land use of provisionally approved 2004 – ODP the same will not be honored) irrespective of the proposed land use, except if causing serious environmental hazards or detrimental to Airport operation or falling under special agriculture zone excluding the projects of the Government and also except in cases of road alignment, natural drains and water bodies etc ಎಂದು ಇರುತ್ತದೆ. ಅಲ್ಲದೇ ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ157/ಬಿಎಂಆರ್2005 ರ ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ದಿನಾಂಕ: 17/09/2004 ಕ್ಕಿಂತ ಮುಂಚೆ ಭೂಪರಿವರ್ತನೆಯಾಗಿರುವ ಎಲ್ಲಾ ಪ್ರಕರಣಗಳನ್ನು ಸಂರಕ್ಷಿಸಲು ನಿರ್ದೇಶಿಸಲಾಗಿರುತ್ತದೆ. ಉಲ್ಲೇಖ (12) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (13) ರಲ್ಲಿನ ದಿನಾಂಕ: 19/01/2022 ರಂದು ನಡೆದ ಪ್ರಾಧಿಕಾರದ 133 ನೇ ಸಭೆಯ ವಿಷಯ ಸಂ. 133.159 ರ ನಡವಳಿಯಲ್ಲಿ ಸಲ್ಲಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಲಯ ನಿಯಮಾವಳಿಗಳ ರೀತ್ಯ ವಾಹನ ನಿಲುಗಡೆಯನ್ನು, ಗ್ರಾಮ ನಕ್ಷೆ & ಸರ್ವೆ ನಕ್ಷೆಗಳ ಅನುಸಾರ ನಾಲಾ ಪಂಕ್ತೀಕರಣ ಅಳವಡಿಸಿ ಹಾಗೂ ವಲಯನಿಯಮಾವಳಿಗಳ ರೀತ್ಯ ನಾಲಾ ಬಫರ್ ಅಳವಡಿಸಿ, ವಲಯನಿಯಮಾವಳಿಗಳ ಅನುಸಾರ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಸಲ್ಲಿಸಿದ ನಂತರ ಹಲವು ಷರತ್ತುಗಳಿಗೆ ಒಳಪಡಿಸಿ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮದ ಸ.ನಂ. 9 ರಲ್ಲಿ 5ಎ-03ಗು, 10 ರಲ್ಲಿ 5ಎ-03ಗು, 11 ರಲ್ಲಿ 6ಎ-18ಗು, 12 ರಲ್ಲಿ 4ಎ-39ಗು ಮತ್ತು 13 ರಲ್ಲಿ 1ಎ-15ಗು ಒಟ್ಟು 22ಎ-38ಗು ಅಥವಾ 92874.06 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರನ್ವಯ ಹಾಗೂ ವಲಯ ನಿಯಮಾವಳಿಯನ್ವಯ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡವಳಿಕೆಯ ರೀತ್ಯ ಉಲ್ಲೇಖ (14) ರ ಪ್ರಾಧಿಕಾರದ ಪತ್ರದಲ್ಲಿ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸುವಂತೆ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಂತೆ ಅರ್ಜಿದಾರರು ಉಲ್ಲೇಖ (15) ರಲ್ಲಿ ಪ್ರಾಧಿಕಾರಕ್ಕೆ ಪರಿಶೀಲನಾ ಶುಲ್ಕವನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಹಾಗೂ 'ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರು ಗಾಲ್ಫ್ ರಿಸಾರ್ಟ್ ಮತ್ತು ಸ್ಪಾ ಉದ್ದೇಶದ ಪರಿಷ್ಕೃತ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಬರುವ ರಾಜ್ಯ ಹೆದ್ದಾರಿ ಸಂಖ್ಯೆ 104 ರ ರಸ್ತೆ ಮಾರ್ಜಿನ್‌ಗಾಗಿ ಕಾಯ್ದಿರಿಸಿರುವ ಜಾಗವನ್ನು ಈಗಾಗಲೇ ಉಲ್ಲೇಖ (15) ರಂತೆ ಯೋಜನಾ ಪ್ರಾಧಿಕಾರಕ್ಕೆ, ಉಪನೋಂದಣಾಧಿಕಾರಿಗಳು, ದೇವನಹಳ್ಳಿ ರವರ 1 ನೇ ಪುಸ್ತಕದ ದಸ್ತಾವೇಜು ಸಂಖ್ಯೆ: ಡಿಎನ್‌ಹೆಚ್–1–001185/2020–21 ಆಗಿ ಸಿ.ಡಿ ನಂ. ಡಿಎನ್‌ಹೆಚ್‌ಡಿ 1013 ನೇ ದ್ದರಲ್ಲಿ ದಿನಾಂಕ: 15/05/2020 ರಂತೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸದರಿ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ಸಂ. ಬಿಐಎಪಿಎ/ಟಿಪಿ/ಎಲ್‌ಎಓ/ಡಿಪಿ/106/2021–22** 1469 ದಿನಾಂಕ: 13 MAY 2022

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮದ ಸ.ನಂ. 9 (ಹೊಸ ನಂ.9/1) ರಲ್ಲಿ 5ಎ–03ಗು, 10 ರಲ್ಲಿ 5ಎ–03ಗು, 11 ರಲ್ಲಿ 6ಎ–18ಗು, 12 ರಲ್ಲಿ 4ಎ–39ಗು ಮತ್ತು 13 ರಲ್ಲಿ 1ಎ–15ಗು ಒಟ್ಟು 22ಎ–38ಗು ಅಥವಾ 92874.06 ಚ.ಮೀ ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ಉಪಯೋಗದ "ಅಭಿವೃದ್ಧಿ ಯೋಜನಾ ನಕ್ಷೆ" ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 15 ರನ್ವಯ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಿದೆ.

**ಷರತ್ತುಗಳು:**

1) ಪ್ರಾಧಿಕಾರಕ್ಕೆ ಸಂಬಂಧಪಟ್ಟ ಶುಲ್ಕಗಳನ್ನು ಪಾವತಿಸುವುದು.
2) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಪೂರೈಕೆ ಬಗ್ಗೆ ಅರ್ಜಿದಾರರು ಖಾತ್ರಿಪಡಿಸತಕ್ಕದ್ದು.
3) ಅಭಿವೃದ್ಧಿ ಯೋಜನೆಯಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು.
4) ಪ್ರಾಧಿಕಾರವು ಅನುಮೋದಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ.
5) ಉದ್ಯಾನವನ ಮತ್ತು ಬಯಲು ಜಾಗಗಳನ್ನು ಹಾಗೂ ಸಿ.ಎ. ಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಅಭಿವೃದ್ಧಿಪಡಿಸತಕ್ಕದ್ದು.
6) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸತಕ್ಕದ್ದು.

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

7) ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಪರಿಶೀಲಿಸಿಕೊಳ್ಳತಕ್ಕದ್ದು.

8) ವಿವರವಾದ ಕಟ್ಟಡ ನಕ್ಷೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15ರ ಅಡಿಯಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳತಕ್ಕದ್ದು.

9) ವಲಯ ನಿಯಮಾವಳಿಯಂತೆ ಈ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ಉದ್ದೇಶಿತ ಕಟ್ಟಡಗಳ ಬ್ಲಾಕ್‌ಗಳು, ಉಪಗಮನ ರಸ್ತೆ, ಹೈವೇಗಳು, ಉದ್ಯಾನವನ ಮತ್ತು ಖಾಲಿ ಜಾಗಗಳು, ನಾಗರೀಕ ಸೌಕರ್ಯ ಜಾಗಗಳನ್ನು ನಿಗದಿಪಡಿಸಿರುವ ನಕ್ಷೆಯಾಗಿದ್ದು ಎಲ್ಲಾ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.

10) ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಅಗತ್ಯ ಅಭಿವೃದ್ಧಿ ಶುಲ್ಕವನ್ನು ಯೋಜನಾ ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ಪಾವತಿಸತಕ್ಕದ್ದು.

11) ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆಯುಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು, ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸತಕ್ಕದ್ದು.

12) ಅಗ್ನಿಶಾಮಕ ಇಲಾಖೆ, ವೈಮಾನಿಕ ಇಲಾಖೆ, ಸ್ಥಳೀಯ ಸಂಸ್ಥೆ, ಬೆಸ್ಕಾಂ ಹಾಗೂ ಕೆ.ಎಸ್.ಪಿ.ಸಿ.ಬಿ. ಮಂಡಳಿ/ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಯೋಜನಾ ಪ್ರಾಧಿಕಾರವು ಪಡೆದು ಕಟ್ಟಡ ನಕ್ಷೆ ಮಂಜೂರಾತಿ ನೀಡುವುದು.

13) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರಿ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

14) ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನುಗಳ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ.

15) ಅಭಿವೃದ್ಧಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ, Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

16) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

17) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗೆಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ/ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ consent for Establishment ಅನುಮತಿ ಪಡೆಯತಕ್ಕದ್ದು.

18) ಪ್ರಸ್ತಾವಿತ ಪ್ರದೇಶಕ್ಕೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿದಾರರು ಒದಗಿಸತಕ್ಕದ್ದು.

19) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ಸದರಿ ಪ್ರದೇಶದಲ್ಲಿನ ಮಲೀನ ನೀರನ್ನು ಬಿಡಬಾರದು. ಸದರಿ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವೆಗಾಗಿ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling tracks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

20) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 15(4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

13.01.22

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

ರವರಿಗೆ,
ಮೆ|| ವಿಲೇಜ್ ಡಿ ನಂದಿ ಪ್ರೈ.ಲಿ., ಪರವಾಗಿ
ನಿರ್ದೇಶಕರಾದ ಶ್ರೀಮತಿ ಬದ್ರುನಿಸ್ಸಾ
ಇರ್ಫಾನ್ ಮತ್ತು ಇತರರು,
ಪ್ರೆಸ್ಟೇಜ್ ಫಾಲ್ಕನ್ ಟವರ್,
ನಂ.19, ಬ್ರಂಟನ್ ರಸ್ತೆ,
ಬೆಂಗಳೂರು-560025.